
# ಕಡಮಗುಂಡಿ

## ಪಶ್ಚಿಮಘಟ್ಟದ ಅಜ್ಞಾತ ಸುಂದರಿ

ಪಶ್ಚಿಮಘಟ್ಟದ ಗಿರಿಕಂದರಗಳಲ್ಲಿ ಅಡಗಿ ಕುಳಿತಿರುವ ಕಡಮಗುಂಡಿ ಜಲಪಾತ ಚಾರಣಪ್ರಿಯರನ್ನು ಕೈಬೀಸಿ ಕರೆಯುವ ತಾಣ.

■ ರಾಧಾ ಕಂಕಾರಿ



ಪ್ರವಾಸ/ಚಾರಣ ಮಾಡುವುದೆಂದರೆ ನಮ್ಮನ್ನು ನಾವು ಅವಲೋಕನಕ್ಕೆ ಒಡ್ಡಿಕೊಂಡಂತೆ. ಹೀಗೆ ಅವಲೋಕನ ಮಾಡಿಕೊಳ್ಳುವಂಥ ಸಂದರ್ಭ ಈಚೆಗೆ ಒದಗಿಬಂದಿತ್ತು, ಬೆಳ್ತಂಗಡಿಯತ್ತ ನಮ್ಮ ಪ್ರವಾಸ ಹೊರಟಿತ್ತು.

ಬೆಳ್ತಂಗಡಿಯ ಹಸಿರು ಹುಚ್ಚು ಹಿಡಿಸಿತ್ತು. ಚಾರಣ ಮಾಡಲು ಸೂಕ್ತ ಸ್ಥಳಕ್ಕೆ ಹುಡುಕಾಟ ನಡೆಸಿದೆವು. ಆಗ ನಮಗೆ ಸಿಕ್ಕಿದ್ದೇ ಈ ಅಜ್ಞಾತ ಸುಂದರಿ ದಿಡುಪೆ/ಕಡಮಗುಂಡಿ ಜಲಪಾತ. ಗಿರಿಕಂದರಗಳಲ್ಲಿ ಅಜ್ಞಾತವಾಗಿರುವ ಈ ಸುಂದರಿಯನ್ನು ದಿಡುಪೆಗೆ ಹತ್ತಿರವಿರುವ ಕಾರಣದಿಂದ 'ದಿಡುಪೆ ಜಲಪಾತ' ಎಂದು ಕರೆಯುತ್ತಾರೆ. ಸ್ಥಳೀಯರು ಮಾತ್ರ 'ಕಡಮಗುಂಡಿ' ಎಂದೇ ಕರೆಯುವುದು.

ಬೆಳ್ತಂಗಡಿ ಚಾರಣಪ್ರಿಯರನ್ನು ಕೈ ಬೀಸಿ ಕರೆಯುವ ಬಂಧು. ಧರ್ಮಸ್ಥಳ ಮತ್ತು ಬೆಳ್ತಂಗಡಿಗೆ ಸಮೀಪವಿರುವ ಉಜಿರೆಯಿಂದ 23 ಕಿ.ಮೀ. ದೂರದಲ್ಲಿರುವ ದಿಡುಪೆಗೆ ಬರುವ ಪೂರ್ವಮಧ್ಯೆ ಸೋಮನತಡ್ಕಕ್ಕೆ ಬಂದು ಅಲ್ಲಿಂದ ಅಡ್ಡರಸ್ತೆಯಲ್ಲಿ ದಿಡುಪೆಗೆ ಹೋಗಬೇಕು. ಒಳದಾರಿಯಿಂದ 3 ಕಿ.ಮೀ. ಮಣ್ಣಿನ ರಸ್ತೆಯಲ್ಲಿ ನಮ್ಮದೇ ಗಾಡಿ ಅಥವಾ ಅಲ್ಲಿರುವ ಜೀಪ್‌ಗಳಲ್ಲಿ ಹೋಗಬಹುದು. ಈ ಮಣ್ಣಿನ ರಸ್ತೆ ಮುಗಿದ ನಂತರ ಪ್ರಾರಂಭವಾಗುವುದೇ ನಿಜವಾದ ಟ್ರೆಕ್ಕಿಂಗ್. 2.5 ಕಿ.ಮೀ. ಕಾಲುದಾರಿಯಲ್ಲಿ ಕ್ರಮಿಸಬೇಕು. ಟ್ರೆಕ್ಕಿಂಗ್ ಪ್ರಾರಂಭದಲ್ಲಿಯೇ ಅರಣ್ಯ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯ. ಇತ್ತೀಚೆಗೆ ಅರಣ್ಯ ಇಲಾಖೆಯಿಂದ ಪ್ರವೇಶ ಶುಲ್ಕವನ್ನು ಸಹ ನಿಗದಿ ಮಾಡಲಾಗಿದೆ. ಸಂಜೆ 5 ಗಂಟೆ ಬಳಿಕ ಪ್ರವೇಶ ನಿಷಿದ್ಧ.

ಚಾರಣದ ಪ್ರಾರಂಭದಲ್ಲಿಯೇ ಕಾಣಸಿಗುವ ತೊರೆ ಮನಸ್ಸಿಗೆ ಆಹ್ಲಾದ ನೀಡುತ್ತದೆ. ಈ ಜಲಪಾತಕ್ಕೆ ಸಾಗುವ ದಾರಿಯ ಮಧ್ಯೆ ಅಲ್ಲಲ್ಲಿ ಸಣ್ಣ ಸಣ್ಣ ಸೇತುವೆಗಳು ಸಿಗುತ್ತವೆ. ಹತ್ತಬೇಕಾಗಿರುವ ಈ ಶ್ರೇಣಿಯು ಮೆಟ್ಟಿಲುಗಳನ್ನು ಹತ್ತಿದಂತೆ ಸುಲಭವಾಗಿರುವುದಿಲ್ಲ. ಕ್ರಮಿಸಿದಷ್ಟು ಸುಸ್ತು ಹೊಡೆಸುವ ಕಡಿದಾದ ಕಲ್ಲುಬಂಡೆಗಳ ದಾರಿ. ಉಸ್ಸಪ್ಪ ಎಂದು ಸುಧಾರಿಸಿಕೊಳ್ಳಲು ಕೂತರೆ ಪಾತಾಳಕ್ಕೆ ಬೀಳಬಹುದಾದ ಸಣ್ಣ ಭಯ ಅರೆಕ್ಷಣ ಕಾಡದೆ ಬಿಡದು. ಆದರೂ ಪರ್ವತಶ್ರೇಣಿ ಪಕ್ಕದಲ್ಲಿಯೇ ಕಣಿವೆ ಮಾರ್ಗವಾಗಿ ಹರಿಯುವ ಜಲಧಾರೆಯ ಸದ್ದು ಸುಸ್ತನ್ನು ಮರೆಮಾಚಿ ಗುರಿ ಮುಟ್ಟುವಂತೆ ಉತ್ತೇಜಿಸುವುದಂತೂ ಸತ್ಯ.

ಪಶ್ಚಿಮಘಟ್ಟಗಳಲ್ಲಿ ಗುಪ್ತರತ್ನದಂತಿರುವ ಈ ದಿಡುಪೆ/ಕಡಮಗುಂಡಿ ಜಲಪಾತವನ್ನು ಏರುತುದಿಯಿಂದ ನೋಡಲು ಕಣ್ಣುಗಳೆರಡು ಸಾಲವು. ಒಂದೆಡೆ ಕಲ್ಲುಬಂಡೆಯ ಶಿಖರ, ಇನ್ನೊಂದೆಡೆ ಹಸಿರು ಪರ್ವತಶ್ರೇಣಿ. ಇವೆರಡರ ಮಧ್ಯೆ ಪ್ರಶಾಂತ ಮತ್ತು ಸ್ನಿಗ್ಧತೆಯಿಂದ ಧುಮ್ಮಿಕ್ಕುವ ಜಲಧಾರೆ. ಈ ಸೌಂದರ್ಯ ಮಳೆಗಾಲದಲ್ಲಿ ಮತ್ತಷ್ಟು ರಮಣೀಯಗೊಳ್ಳುತ್ತದೆ. ಕಣಿವೆಯ ಕೆಳಗಿನಿಂದ ಮೇಲೆತ್ತರದ ಜಲಪಾತಕ್ಕೆ ಕಣ್ಣು ಹಾಯಿಸಿದರೆ ಅಲ್ಲಲ್ಲಿ ಕಾಣುವ ನೇರಳೆ ಬಣ್ಣದ ಹೂಗಳ ಗುಚ್ಛ ಜಲಪಾತದ ಸೌಂದರ್ಯಕ್ಕೆ ಇನ್ನಷ್ಟು ಮೆರಗು ತಂದಂತೆ ತೋರುತ್ತದೆ.

ಮಳೆಗಾಲದಲ್ಲಿ ನೀರಿನ ಹರಿವು ಹೆಚ್ಚಾಗಿರುವುದರಿಂದ ಜಲಪಾತದ ಬುಡಕ್ಕೆ ಹೋಗಲು ಸಾಧ್ಯವಾಗುವುದಿಲ್ಲ. ಅಲ್ಲದೆ ಬಂಡೆಗಳು ಸಹ ತುಂಬಾ ಜಾರುತ್ತವೆ. ಆದರೆ ಅಲ್ಲಿಂದ ಹರಿದು ಬರುವ ನೀರಿನ ತೊರೆಯಲ್ಲಿ ಮಿಂದು ಖುಷಿಪಡಬಹುದು. ಬೇಸಿಗೆ ಸಮಯದಲ್ಲಿ ಹೋದರೆ ಜಲಪಾತವನ್ನು ಮುಟ್ಟಬಹುದು. ಅದರ ತಳದಲ್ಲಿ ನಡೆದಾಡಬಹುದು, ಈಜಬಹುದು, ಆಟವಾಡಬಹುದು.

ಸೂರ್ಯನ ಕಿರಣಗಳೆಲ್ಲ ಹೊನ್ನಿನ ಕಿರಣಗಳಾಗಿ ಜಲಪಾತವನ್ನು ಅಪ್ಪುವುದನ್ನು ನೋಡುವುದು ಸೊಗಸು. ಮಧ್ಯಾಹ್ನದೊತ್ತಿಗೆ ಕಾಮನಬಿಲ್ಲಿನ ರಂಗಿನಾಟವೂ ನೀರಲ್ಲಿ ಕಾಣುತ್ತದೆ. ಚಾರಣಪ್ರಿಯರಿಗೆ ಕಡಮಗುಂಡಿ ಜಲಪಾತದ ಸೊಗಸು ಮನಸ್ಸಿನಾಳಕ್ಕೆ ಇಳಿಯುವುದಂತೂ ಸತ್ಯ. ■